**ದಿಃ 23.06.2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ವೈಎಂ ಆರ್ ವಕೀಲರಿಂದ**

ಈ ದಾವೆಯನ್ನು ಯಾರು ಯಾರ ವಿರುದ್ದ ಯಾವ ಕಾರಣಕ್ಕೆ ದಾಖಲಿಸಿದ್ದಾರೆ ಎಂದು ನನಗೆ ಮಾಹಿತಿ ಇದೆ. 1 ನೇ ಪ್ರತಿವಾದಿಯು 2 ನೇ ವಾದಿ ಮಗ ಅಲ್ಲ ಎಂದು ಹೇಳುತ್ತಿರುವ ಕಾರಣ ಈ ದಾವೆಯನ್ನು ದಾಖಲಿಸಿರುತ್ತಾರೆ. ನಾನು ಓದಿಲ್ಲ. ಸಾಕ್ಷಿ ಪ್ರಮಾಣ ಪತ್ರವನ್ನು 2 ನೇ ವಾದಿ ತಯಾರಿಸಿದ್ದು ಅದಕ್ಕೆ ನಾನು ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ. ನನ್ನ ಮದುವೆ 24 ವರ್ಷಗಳ ಹಿಂದೆ ಆಗಿರುತ್ತದೆ. ದಿನಾಂಕ ಮತ್ತು ಇಸವಿ ಗೊತ್ತಿಲ್ಲ. ನನ್ನ ತಂದೆಗೆ 7 ಜನ ಮಕ್ಕಳು ಇದ್ದು ಮೊದಲನೆಯವರು ಗಂಗಮ್ಮ ಇರುತ್ತಾರೆ. 2 ನೇ ಯವರು ರಾಜಪ್ಪ 3 ನೇ ಯವರು ಜಯಲಕ್ಷ್ಮಮ್ಮ 4 ನೇ ಯವರು ಹಾಲಮ್ಮ 5 ನೇ ಯವರು ಹನುಮಂತಪ್ಪ 6 ನೇ ಯವರು ಶಿವಪ್ಪ 7 ನೇ ಯವರು ನಾನೇ ಇರುತ್ತೇನೆ. ಗಂಗಮ್ಮನ ಮದುವೆ ಯಾವಾಗ ಆಯಿತು ಎಂದು ದಿನಾಂಕ ನೆನಪಿಲ್ಲ. ಗಂಗಮ್ಮನ ಮದುವೆಯಾಗಿ ಸರಿ ಸುಮಾರು 50 ವರ್ಷ ಆಗಿರಬಹುದು. ಗಂಗಮ್ಮನನ್ನು ಬುಳುಸಾಗರದ ರಂಗಪ್ಪನಿಗೆ ಕೊಟ್ಟು ನಮ್ಮ ಮನೆಯ ಮುಂದೆ ಮದುವೆ ಮಾಡಿದ್ದರು. ಜಯಲಕ್ಷ್ಮಮ್ಮರವರ ಮದುವೆ ಯಾವಾಗ ಆಯಿತು ಎಂದು ದಿನಾಂಕ ನೆನಪಿಲ್ಲ. ಅವರ ಮದುವೆ ಕೃಷ್ಣಪ್ಪರವರ ಮನೆಯ ಮುಂದೆ ಆಗಿರುತ್ತದೆ. ಅವರ ಮದುವೆಯಾಗಿ 45 ವರ್ಷಗಳು ಆಗಿರಬಹುದು. ಆಗ ನನ್ನ ವಯಸ್ಸು 8 ರಿಂದ 12 ವರ್ಷ ಇರಬಹುದು. ನಾನು 8 ರಿಂದ 10 ವರ್ಷ ಇರುವಾಗ ನನಗೆ ಬುದ್ದಿ ಇರುವ ಕಾರಣ ನನ್ನ ಅಕ್ಕ ಜಯಲಕ್ಷ್ಮಮ್ಮ ನ ಮದುವೆಯಾಗಿ 45 ವರ್ಷ ಆಗಿರುತ್ತದೆ ಎಂದು ಹೇಳುತ್ತಿದ್ದೇನೆ. 1 ನೇ ವಾದಿ ಹುಟ್ಟಿದಾಗಿನಿಂದ ಮದುವೆಯಾಗುವವರೆಗೂ ಗಾಣದಕಟ್ಟೆಯಲ್ಲಿ ವಾಸವಿದ್ದರು. ನನ್ನ ಸಾಕ್ಷಿ ಪ್ರಮಾಣ ಪತ್ರ ಸಲ್ಲಿಸಿದ ದಿನದಿಂದ ಹಿಂದೆ 20 ವರ್ಷಗಳಿಂದ ಕೆ ಗಾಣದಕಟ್ಟೆಯಲ್ಲಿ ಅವರು ವಾಸವಿರುತ್ತಾರೆ ಎಂದರೆ ಸಾಕ್ಷಿಯು ಅವರು ಮದುವೆಯಾದ ನಂತರ ಕೃಷ್ಣಪ್ಪರವರ ಜೊತೆ ನಲ್ಲೂರಿನಲ್ಲಿ ವಾಸವಿದ್ದರು ಎಂದು ನುಡಿಯುತ್ತಾರೆ. ನಲ್ಲೂರಿನಲ್ಲಿ ಯಾವ ವರ್ಷದಿಂದ ಯಾವ ವರ್ಷದವರೆಗೂ ವಾಸವಿದ್ದರು ಎಂದು ನನಗೆ ನೆನಪಿಲ್ಲ. ಈಗ ಗಾಣದಕಟ್ಟೆಯಲ್ಲಿ ವಾಸವಿರುತ್ತಾರೆ. ಗಾಣದಕಟ್ಟೆಯಲ್ಲಿ 1 ನೇ ವಾದಿಯು ಪ್ರತಿ ತಿಂಗಳು ಮಾಸಾಶನ ಪಡೆಯುವ ಬಗ್ಗೆ ನನಗೆ ಗೊತ್ತಿಲ್ಲ. ನಿಡಿ.1 ರಲ್ಲಿರುವ ಭಾವಚಿತ್ರ 1 ನೇ ವಾದಿಯದ್ದು ಇರುತ್ತದೆ. ಎ ಕೆ ಹಾಲಮ್ಮ ಬಿನ್ ಎ ಕೆ ಬಸಪ್ಪ ಎಂದರೆ ನನ್ನ ಅಕ್ಕ ಎಂದರೆ ಸರಿ. ಶ್ರೀಮತಿ ದುರ್ಗಮ್ಮ ನನ್ನ ತಾಯಿ ಎಂದರೆ ಸರಿ. ನಿಡಿ.3 ರಂತೆ ನನ್ನ ಅಕ್ಕ ಉಪ

ತಹಶೀಲ್ದಾರ್ ಚನ್ನಗಿರಿರವರ ಕಡೆಯಿಂದ ಆದಾಯ ಪ್ರಮಾಣ ಪತ್ರ ಪಡೆದಿರುತ್ತಾರೆ ಎಂದರೆ ಸಾಕ್ಷಿಯು ಅದು ಸುಳ್ಳು ಇರುತ್ತದೆ ಎಂದು ನುಡಿಯುತ್ತಾರೆ. ಕೆ ಗಾಣದಕಟ್ಟೆಯಲ್ಲಿ 1 ನೇ ವಾದಿಯ ಹೆಸರಿಗೆ ಯಾವುದೇ ಜಮೀನು ಇಲ್ಲ. ನಿಡಿ.4 ರಂತೆ 1 ನೇ ವಾದಿಯು ಕೆ ಗಾಣದಕಟ್ಟೆಯಲ್ಲಿ ಯಾವುದೇ ಜಮೀನು ಇಲ್ಲ ಎಂದು ದೃಡೀಕರಣ ಪ್ರಮಾಣ ಪತ್ರ ಪಡೆದ ಬಗ್ಗೆ ನನಗೆ ನೆನಪಿಲ್ಲ. ನಾಗರಾಜ ಎಂದರೆ ನಿಡಿ.5 ರಲ್ಲಿರುವವರು ಎಂದರೆ ಸರಿ.

1 ನೇ ವಾದಿಯ ಮದುವೆ ಕುಕ್ಕವಾಡದಮ್ಮನ ದೇವಸ್ಥಾನದಲ್ಲಿ ಆಗಿರುತ್ತದೆ. ದಿನಾಂಕ, ತಿಂಗಳು ಮತ್ತು ವರ್ಷ ನೆನಪಿಲ್ಲ. ಅವರ ಮದುವೆಯಾಗಿ 40 ವರ್ಷಗಳು ಆಗಿರಬಹುದು. ಜಯಲಕ್ಷ್ಮಮ್ಮ ಮತ್ತು ಕೃಷ್ಣಪ್ಪನ ನಡುವೆ ಯಾವುದೇ ವಿವಾಹ ವಿಚ್ಛೇದನ ಆಗಿಲ್ಲ ಎಂದರೆ ಸರಿ. ಜಯಲಕ್ಷ್ಮಮ್ಮ ಮತ್ತು ಕೃಷ್ಣಪ್ಪನಿಗೆ ಇಬ್ಬರು ಹೆಣ್ಣು ಮಕ್ಕಳು ಒಬ್ಬ ಗಂಡು ಮಗ. ಆ ಮಕ್ಕಳಲ್ಲಿ ಒಬ್ಬರಿಗೆ 35 ವರ್ಷ, ಒಬ್ಬರಿಗೆ 40 ವರ್ಷ ಮತ್ತು ಇನ್ನೊಬ್ಬರಿಗೆ 38 ವರ್ಷ ಇರಬಹುದು. ಈ ಮೂರು ಜನರು ನಲ್ಲೂರಿನಲ್ಲಿ ಜನಿಸಿರುತ್ತಾರೆ ಎಂದರೆ ಸರಿ. ಜಯಲಕ್ಷ್ಮಮ್ಮ ಮತ್ತು ಕೃಷ್ಣಪ್ಪರ ಮನೆಯ ಚೆಕ್ ಬಂದಿ ನೆನಪಿಲ್ಲ. ಆ ಮನೆ ನಾನು ನೋಡಿದ್ದೇನೆ. ಅದು ಕೆಂಪು ಹಂಚಿನ ಮನೆ ಇರುತ್ತದೆ. 1 ನೇ ವಾದಿಯ ಮಕ್ಕಳ ವಿದ್ಯಾಭ್ಯಾಸ ಕೆ ಗಾಣದಕಟ್ಟೆಯಲ್ಲಿ ಆಗಿರುತ್ತದೆ ಎಂದರೆ ಸರಿಯಲ್ಲ. 1 ನೇ ವಾದಿಗೆ ಇಬ್ಬರು ಮಕ್ಕಳು. ಅವರೆಂದರೆ 2 ಮತ್ತು 3 ನೇ ವಾದಿಯರು ಇರುತ್ತಾರೆ. 2 ನೇ ವಾದಿ ಹಿರಿಯ ಮಗ. 2 ನೇ ವಾದಿಗೆ 40 ಅಥವಾ 42 ವಯಸ್ಸು ಇರಬಹದು. 3 ನೇ ವಾದಿಗೆ 39 ವಯಸ್ಸು ಇರಬಹುದು. 2 ಮತ್ತು 3 ನೇ ವಾದಿಯರು ವಿದ್ಯಾಭ್ಯಾಸ ಮಾಡಿರುತ್ತಾರೆ. 20 ವರ್ಷಗಳ ಹಿಂದೆ ಕೆ ಗಾಣದಕಟ್ಟೆಯಲ್ಲಿ 4 ನೇ ತರಗತಿವರೆಗೆ ಶಾಲೆ ಇತ್ತು. 2 ಮತ್ತು 3 ನೇ ವಾದಿಯರು 4 ನೇ ತರಗತಿವರೆಗೆ ಕೆ ಗಾಣದಕಟ್ಟೆಯಲ್ಲಿ ವಿದ್ಯಾಭ್ಯಾಸ ಮಾಡಿರುತ್ತಾರೆ ಎಂದರೆ ಸರಿಯಲ್ಲ. 5 ರಿಂದ 8 ಯನ್ನು ನಲ್ಲೂರಿನಲ್ಲಿ ಓದಿರುತ್ತಾರೆ. 9 ಮತ್ತು 10 ನೇ ತರಗತಿಯನ್ನು ಎಲ್ಲಿ ಓದಿರುತ್ತಾರೆ ಎಂದು ನನಗೆ ನೆನಪಿಲ್ಲ. ನಿಪಿ.23 ರಲ್ಲಿ ಸುನೀತಾ ತಂದೆ ಕೆ ಕೃಷಪ್ಪ ಕೆ ಗಾಣದಕಟ್ಟೆ ಎಂದು ಇರುತ್ತದೆ ಎಂದರೆ ಸರಿ. 1993-94 ರಲ್ಲಿ ಕೆ ಸುನೀತಾರವರು ಎಷ್ಟನೇ ತರಗತಿ ಓದುತ್ತಿದ್ದರು ಎಂದು ನನಗೆ ನೆನಪಿಲ್ಲ.

1 ನೇ ವಾದಿ ಮತ್ತು ಮೃತ ಕೃಷ್ಣಪ್ಪನ ಮದುವೆಯ ಸಮಯದಲ್ಲಿ ಯಾವುದಾದರೂ ಭಾವಚಿತ್ರದಲ್ಲಿ ನಾನು ಇಲ್ಲ. ನಿಪಿ.31 ರಲ್ಲಿರುವ ಭಾವಚಿತ್ರಗಳಲ್ಲಿ ನಾನು ಇಲ್ಲ. ನಿಪಿ.31 ರ ಭಾವಚಿತ್ರಗಳು 2 ನೇ ವಾದಿಯ ಮದುವೆಯ ಭಾವಚಿತ್ರಗಳು ಇದ್ದು ಅವರ ಮದುವೆ ಮುದ್ದೇನಹಳ್ಳಿಯ ಕಲ್ಯಾಣ ಮಂಟಪದಲ್ಲಿ ಆಗಿರುತ್ತದೆ. ಆ ಸಮಯದಲ್ಲಿ ಲಗ್ನ ಪತ್ರಿಕೆಯನ್ನು ತಯಾರಿಸಿದ್ದು ಅದನ್ನು ನಾನು ನೋಡಿರುತ್ತೇನೆ. ಸದರಿ ಲಗ್ನ ಪತ್ರಿಕೆಯನ್ನು ಕೃಷ್ಣಪ್ಪ

ಮಾಡಿಸಿದ್ದರು. ಅದರಲ್ಲಿ ನನ್ನ ಹೆಸರು ಇದೆಯೋ ಇಲ್ಲವೋ ನೆನಪಿಲ್ಲ. ನಿಪಿ.34 ನ್ನು 2 ನೇ ವಾದಿಯು ಈ ದಾವೆಗೋಸ್ಕರ ಸೃಷ್ಟಿ ಮಾಡಿಕೊಂಡು ಬಂದು ಹಾಜರುಪಡಿಸಿದ್ದಾರೆ ಎಂದರೆ ಸರಿಯಲ್ಲ. ಜಯಲಕ್ಷ್ಮಮ್ಮ ಮತ್ತು ಕೃಷ್ಣಪ್ಪನಿಗೆ ಎರಡು ಮಕ್ಕಳು ಆದ ನಂತರ ಕೃಷ್ಣಪ್ಪರವರು 1 ನೇ ವಾದಿಯನ್ನು 2 ನೇ ಹೆಂಡತಿಯಾಗಿ ಮದುವೆಯಾಗಿರುತ್ತಾರೆ. ನನ್ನ ತಂದೆ ಮೂಲ ಕಸುಬು ಕೃಷಿ ಎಂದರೆ ಸರಿ. ನಮ್ಮ ಕುಟುಂಬದ ಆಸ್ತಿಯನ್ನು ಸುಮಾರು 20-25 ವರ್ಷಗಳ ಹಿಂದೆಯೇ ವಿಭಾಗ ಮಾಡಿಕೊಂಡಿರುತ್ತೇವೆ. ಸದರಿ ಪತ್ರ ನೋಂದಣಾಧಿಕಾರಿ ಕಚೇರಿಯಲ್ಲಿ ನೋಂದಣಿಯಾಗಿಲ್ಲ. ನನ್ನ ತಂದೆ ಮರಣದ ನಂತರ ಅವರ ಆಸ್ತಿ ನನ್ನ ತಾಯಿ, ನನ್ನ ಅಣ್ಣ ಮತ್ತು ನನ್ನ ಹೆಸರಿನಲ್ಲಿ ಜಂಟಿ ಖಾತೆಯಾಗಿರುತ್ತದೆ. ಸುಮಾರು 20 ವರ್ಷಗಳ ಹಿಂದೆ ಜಂಟಿ ಖಾತೆಯಾಗಿರುತ್ತದೆ. ನಮ್ಮ ಮತ್ತು ಜಯಲಕ್ಷ್ಮಮ್ಮನ ನಡುವೆ ಆಸ್ತಿ ವಿಚಾರದಲ್ಲಿ ವೈಮನಸ್ಸು ಇತ್ತು ಎಂದರೆ ಸರಿಯಲ್ಲ. ನನ್ನ ತಂದೆಯ 7 ಜನ ಮಕ್ಕಳಲ್ಲಿ ಹನುಮಂತಪ್ಪ ಮತ್ತು ಶಿವಮೂರ್ತಿ ಮರಣ ಹೊಂದಿದ್ದಾರೆ ಎಂದರೆ ಸರಿ. ಜಯಲಕ್ಷ್ಮಮ್ಮರವರು ತನ್ನ ತಂದೆಯ ಆಸ್ತಿಯಲ್ಲಿ ತನಗೂ ಸಹ ಪಾಲು ಬೇಕು ಎಂದು ನಮ್ಮನ್ನು ಕೇಳಿದ್ದರು ಎಂದರೆ ಸರಿಯಲ್ಲ. ಅವರು ಆ ರೀತಿ ಪಾಲು ಕೇಳಿದ್ದರಿಂದ ನಮ್ಮ ಮತ್ತು ಜಯಲಕ್ಷ್ಮಮ್ಮನ ನಡುವೆ ವೈಮನಸ್ಸು ಉಂಟಾಯಿತು ಎಂದರೆ ಸರಿಯಲ್ಲ. ಅವರಿಗೆ ತೊಂದರೆ ಕೊಡಬೇಕು ಎನ್ನುವ ಉದ್ದೇಶದಿಂದ 2 ನೇ ವಾದಿಯ ಮಾತನ್ನು ಕೇಳಿ ಸುಳ್ಳು ಸಾಕ್ಷಿ ನುಡಿಯುತ್ತಿರುವೆ ಎಂದರೆ ಸರಿಯಲ್ಲ. 1 ನೇ ವಾದಿಯು ಇಲ್ಲಿಯವರೆಗೂ ದೇವದಾಸಿ ಆಗಿದ್ದು ಅವರು ದೇವದಾಸಿ ಮಾಸಾಶನ ಪಡೆಯುತ್ತಿದ್ದಾರೆ ಎಂದರೆ ಸರಿಯಲ್ಲ. 1 ನೇ ವಾದಿಯು ಯಾವತ್ತು ಕೃಷ್ಣಪ್ಪನನ್ನು ಮದುವೆಯಾಗಿಲ್ಲ ಎಂದರೆ ಸರಿಯಲ್ಲ. 2 ಮತ್ತು 3 ನೇ ವಾದಿಯರು ಹೆಚ್ ಕೃಷ್ಣಪ್ಪನ ಮಕ್ಕಳು ಅಲ್ಲ ಎಂದರೆ ಸರಿಯಲ್ಲ. 2 ಮತ್ತು 3 ನೇ ವಾದಿಯರು ಯಾವತ್ತು ಕೃಷ್ಣಪ್ಪನ ಜೊತೆ ನಲ್ಲೂರಿನಲ್ಲಿ ವಾಸವಿರಲಿಲ್ಲ ಎಂದರೆ ಸರಿಯಲ್ಲ. ಜಯಲಕ್ಷ್ಮಮ್ಮ ಮತ್ತು ಕೃಷ್ಣಪ್ಪರವರಿಗೆ 3 ಜನ ಮಕ್ಕಳಿದ್ದು ಅವರು ಮಾತ್ರ ನಲ್ಲೂರಿನಲ್ಲಿ ವ್ಯವಸಾಯ ಮಾಡುತ್ತಾ ವಾಸವಿರುವ ವಿಷಯ ನನಗೆ ಗೊತ್ತಿದ್ದರು ಸಹ ಸುಳ್ಳು ಸಾಕ್ಷಿ ನುಡಿಯುತ್ತಿರುವೆ ಎಂದರೆ ಸರಿಯಲ್ಲ. ಕೃಷ್ಣಪ್ಪನಿಗೆ ಯಾವ ಗ್ರಾಮದ ಯಾವ ಸರ್ವೆ ನಂಬರ್ ನಲ್ಲಿ ಆಸ್ತಿ ಇರುತ್ತದೆ ಎಂದು ನನಗೆ ಗೊತ್ತಿಲ್ಲ. ನಾನು ಹುಟ್ಟಿದಾಗಿನಿಂದ ಕೆ ಗಾಣದಕಟ್ಟೆಯಲ್ಲಿ ವಾಸವಿರುತ್ತೇನೆ ಎಂದರೆ ಸರಿ. 1 ನೇ ವಾದಿಯನ್ನು ಹೆಚ್ ಕೃಷ್ಣಪ್ಪನ ಜೊತೆ ಮದುವೆ ಮಾಡಿರುತ್ತೇವೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಸಾಕ್ಷಿ ಪ್ರಮಾಣ ಪತ್ರದಲ್ಲಿ ಬರೆದಿರುವ ಸಂಗತಿಗಳ ಬಗ್ಗೆ ನನಗೆ ವೈಯಕ್ತಿಕ ಮಾಹಿತಿ ಇಲ್ಲ ಎಂದರೆ ಸರಿಯಲ್ಲ. ನಾಗರಾಜ್ ರವರು ಹೆಚ್ ಕೃಷ್ಣಪ್ಪನ ಮಗ ಇರುತ್ತಾರೆ ಎಂದು ಹೇಳಿ ದಾವೆಯನ್ನು ಹಾಕಿರುತ್ತಾರೆ

ಎಂದು ಹೇಳಿರುವುದನ್ನು ಬಿಟ್ಟು ಬೇರೆ ವಿಷಯ ಬರೆಸಿಲ್ಲ ಎಂದರೆ ಸರಿ. ವಾದಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷಿ ನುಡಿಯುತ್ತಿರುವೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ., ಚನ್ನಗಿರಿ.